ವಿಷಯ : ಬೆಂಗಳೂರು ಮಹಾನಗರ ಪಾಲಿಕೆಯು ಬೆಂಗಳೂರು ನಗರದಲ್ಲಿ 'ದೇವರಾಜ್ ಅರಸ್ ವೃತ್ತ' ನಾಮಕರಣ ಮಾಡುವ ಬಗ್ಗೆ.

Q : 365

ಶ್ರೀ ಆರ್. ದಯಾನಂದರಾವ್ (ಗಾಂಧಿನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಮಹಾನಗರ ಪಾಲಿಕೆಯು ಬೆಂಗಳೂರು ನಗರದಲ್ಲಿ ಒಂದು ವೃತ್ತವನ್ನು 'ದೇವರಾಜ್ ಅರಸ್ ವೃತ್ತ' ಎಂದು ಹೆಸರಿಡಲು ತೀರ್ಮಾನಿಸಿದೆಯೇ?

ಆ) ಹಾಗಿದ್ದಲ್ಲಿ, ದೇವರಾಜ್ ಅರಸು ಅವರ ಹೆಸರನ್ನಿಡುವ ಆ ವೃತ್ತವು ಯಾವುದು?

ಇ) ದೇವರಾಜ್ ಅರಸು ಅವರ ಪ್ರತಿಮೆಯನ್ನು ಆ ವೃತ್ತದಲ್ಲಿ ಸ್ಥಾಪಿಸಲಾಗಿದೆಯೇ?

ಈ) ಹಾಗಿಲ್ಲದಿದ್ದಲ್ಲಿ, ದೇವರಾಜ್ ಅರಸು ಅವರ ಪ್ರತಿಮೆಯನ್ನು ಅವರ ಹೆಸರನ್ನಿಟ್ಟಿರುವ ಬೆಂಗಳೂರು ನಗರದಲ್ಲಿಯ ರಸ್ತೆಯಲ್ಲಿ ಸ್ಥಾಪಿಸುವ ಪ್ರಸ್ತಾಪವಿದೆಯೇ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಅ) ಹೌದು.

ಆ) 21ನೇ ವಿಭಾಗದಲ್ಲಿರುವ ಬೆಂಗಳೂರು ಸಿಟಿ ರೈಲ್ವೆ ನಿಲ್ದಾಣದ ಪಕ್ಕದಲ್ಲಿ ಖೋಡೆ ಫ್ಯಾಕ್ಟರಿ ಮುಂಭಾಗದಲ್ಲಿರುವ ವೃತ್ತಕ್ಕೆ ' ದೇವರಾಜ್ ಅರಸ್ ವೃತ್ತ' ಎಂದು ನಾಮಕರಣ ಮಾಡಿರುತ್ತದೆ.

ಇ) ಇಲ್ಲ.

ಈ) ಈ ಬಗ್ಗೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ವಿಷಯ : ಜಲಮಂಡಲಿಯವರಿಂದ ಸಂಚಾರಿ ಕೌಂಟರ್‌ಗಳು.

Q: 366

ಶ್ರೀ ಆರ್. ದಯಾನಂದರಾವ್ (ಗಾಂಧಿನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ವಿದ್ಯುತ್ ಮಂಡಳಿಯಲ್ಲಿರುವಂತೆ ನೀರಿನ ಬೆಲೆ ಪಟ್ಟಿಯನ್ನು ಸಂದಾಯ ಮಾಡಲು ಬೆಂಗಳೂರು ನಗರದ ನಾಗರೀಕರ ಅನುಕೂಲಕ್ಕಾಗಿ ಹಣ ಪಡೆಯುವ ಸಂಚಾರಿ ಕೌಂಟರ್‌ಗಳು ಬೆಂಗಳೂರು ಜಲ ಮಂಡಳಿಯಲ್ಲಿ ಇದೆಯೇ?

ಆ) ಇಲ್ಲವಾಗಿದಲ್ಲಿ, ಸಂಚಾರಿ ಕೌಂಟರ್‌ಗಳನ್ನು ಶುರು ಮಾಡಲು ಜಲ ಮಂಡಳಿಯು ಪ್ರಸ್ತಾವನೆ ಮಾಡಿದೆಯೇ?